ಕಥೆ

# ಅಬ್ರಕಡಬ್ರ



**ಮಿರ್ಜಾ ಬಷೀರ್**

ಕಲೆ: ಭರತ್ ಲದ್ದಿಯವರ್

'ವೆಲಾಸಿಟಿ' ಎಂಬ ದೂರದರ್ಶನ ವಾಹಿನಿಯಲ್ಲಿ 'ಸಕತ್ ಸತಿಪತಿ' ಕಾರ್ಯಕ್ರಮದ ಜಾಹೀರಾತು ಶುರುವಾದಾಗ ಆ ನಗರವಾಸಿಗಳು ರೋಮಾಂಚಿತರಾದರು. ಜನ ಸೇರುವ ಕಡೆಯೆಲ್ಲ ಬರೀ ಅದೇ ಮಾತುಕತೆಗಳಾದವು. ಈಗಾಗಲೇ 'ಪುಗಸಟ್ಟೆ ಗಂಡ ಹೊಟ್ಟುಂಬ ಉಂಡ', 'ಹಣ ದ್ವಿಗುಣ', 'ಗೋಲಿ ಹೊಡಿ ಗುಣಕ್ಕೆ, ಸಲಾಮು ಹೊಡಿ ಹಣಕ್ಕೆ' ಮುಂತಾದ ಟಿವಿ ಕಾರ್ಯಕ್ರಮಗಳಿಂದ ಜನರು ಬಿಟ್ಟಿಯಾಗಿ ಕಾಸು ಮಾಡುವ ಗೀಳಿಗೆ ಬಿದ್ದಿದ್ದರು. ದೇಶೀಯ, ಅಂತರ್ದೇಶೀಯ ಕ್ರಿಕೆಟ್ಟು, ಫುಟ್‌ಬಾಲು, ಕುದುರೆ ರೇಸು ಅಷ್ಟೇ ಅಲ್ಲ, ಗಲ್ಲಿಗಳಲ್ಲಿ ಆಡುವ ಗೋಲಿ ಚಿನ್ನಿದಾಂಡು ಚೌಕಾಬಾರಗಳಿಗೆ ಸಹ ಬೆಟ್ಟಿಂಗ್ ನಡೆಯುತ್ತಿತ್ತು. ಅಲ್ಲಿಯೂ ಮ್ಯಾಚ್ ಫಿಕ್ಸಿಂಗ್ ಸೈತಾನ ಹಾಜರಾಗಿದ್ದ. ಮೋಜು ಮಸ್ತಿಗೆ ದುಡ್ಡು ಬೇಕಾಗಿತ್ತು. ದುಡ್ಡು ಗಳಿಸಲು ಜನ ಏನು ಬೇಕಾದರೂ ಮಾಡಲು ಸಿದ್ಧರಿದ್ದರು. ಬದುಕೆಂಬುದು ರಾಕೆಟ್ ವೇಗದಲ್ಲಿ ಓಡುತ್ತಿತ್ತು. ಅಂಥದ್ದರಲ್ಲಿ 'ಸಕತ್ ಸತಿಪತಿ' ಕಾರ್ಯಕ್ರಮ ಶುರುವಾಗಿ ಹುಚ್ಚರಿಗೆ ಹೆಂಡ ಕುಡಿಸಿದಂತಾಗಿತ್ತು.

'ಸಕತ್ ಸತಿಪತಿ' ಎಂಬ ಕಾರ್ಯಕ್ರಮವು ಸಹ ಒಂದು ರೀತಿ ಜೂಜಾಟದಂತಿತ್ತು. ಕಂಪ್ಯೂಟರ್ ಯಂತ್ರವು ಲಾಟರಿ ರೀತಿಯಲ್ಲಿ ರ್‍ಯಾಂಡಮ್ ಆಗಿ ಆಯ್ದ ಜೋಡಿಗಳು ಹಾಟ್ ಸೀಟಿಗೆ ಬಂದು, ಅಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕಿತ್ತು. ಹತ್ತು ಪ್ರಶ್ನೆಗಳನ್ನು ಗಂಡ ಹೆಂಡತಿಯರಿಗೆ ಬೇರೆ ಬೇರೆಯಾಗಿ ಕೇಳಿ ಉತ್ತರ ಪಡೆಯಲಾಗುವುದು. ಒಂದೇ ರೀತಿಯ ಉತ್ತರವನ್ನು ಯಾವ ಜೋಡಿ ಅತೀ ಹೆಚ್ಚು

